Sri B. BASAVALINGAPPA.—That we will do.

FIRST REPORT OF THE COMMITTEE ON PUBLIC UNDERTAKINGS—PRESENTATION.

Sri M. S. KRISHNAN (Malleswaram).—I present the first of the Committee on Public Undertakings on REMCO.

Madam SPEAKER.—The report is presented.

AFFAIRS OF A MATH IN RAICHUR

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮೊನ್ನೆ ಸಾರಿಗೆ ಮಂತ್ರಿಯವರು ಹಕ್ಕುಭಾದ್ಯತೆಯ ನಿರ್ಣಯ ಚರ್ಚೆ ಮಾಡುವ ಕಾಲದಲ್ಲಿ ರಾಯಚೂರಿನಲ್ಲಿ ಒಂದು ಮಠಕ್ಕೆ ಸೇರಿದ ವಿಚಾರ ಹೇಳಿದ್ದಾರೆ. ಹಾಗೇ ಹೇಳಿರುವುದು ಸರಿಯಲ್ಲವೆಂದು ಅಲ್ಲಿಯ ಮಠದ ಸ್ವಾಮಿಗಳು ಪತ್ರ ಬರೆದಿದ್ದಾರೆ.

ಅಧ್ಯಕ್ಷರು.—ಅದನ್ನು ಅಟೆನ್‌ಶನ್ ನೋಟೀಸ್ ಆಗಿ ಪರಿವರ್ತನೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಅದನ್ನು ಕಾಲಿಂಗ್ ಅಟೆನ್‌ಶನ್ ನೋಟೀಸ್ ಆಗಿ ಮಾಡಿದರೆ ಸಾಲದು.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದವರು ಏನು ನಿಗದಿ ಮಾಡಿದ್ದಾರೆ ಅದಕ್ಕೆ ಅವರು ಕೊಡುವುದಕ್ಕೆ ತಯಾರಾಗಿದ್ದಾರೆಂದು ಹೇಳಿಕೆಯಲ್ಲಿ ಮಂತ್ರಿಯವರು ಹೇಳಿರುವುದು ಸರಿಯಲ್ಲ. ಅದು ಸರಿಯಲ್ಲವೆಂದು ಸ್ವಾಮಿಗಳು ಪತ್ರ ಬರೆದಿದ್ದಾರೆ. ಅದರ ಬಗ್ಗೆ ಅವರು ಸರಿಯಾದ ಹೇಳಿಕೆ ಕೊಡದಿದ್ದರೆ, ನಾವು ಪುನಃ ಹಕ್ಕುಭಾದ್ಯತೆಯ ನಿರ್ಣಯವನ್ನು ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು.—ಮಂತ್ರಿಯವರು ಈಗ ಇಲ್ಲ; ಬಂದ ಮೇಲೆ ಅವರು ಏನಾದರೂ ಉತ್ತರ ಹೇಳುತ್ತಾರೋ ಎಂದು ನೋಡೋಣ.

1-30 ಪಿ.ಎಮ್

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ; ನಾನು ತಮಗೆ ರೂಲ್ 312 ಪ್ರಕಾರ ನರಸಿಂಹ ರಾಜಪುರ ತಾಲ್ಲೂಕಿನಲ್ಲಿ ಒಬ್ಬ ಗೇಣಿದಾರನ ಮನೆಯೊಳಗೆ ನುಗ್ಗಿ.....

ಅಧ್ಯಕ್ಷರು.—ತಾವು ನೆನ್ನೆ ಆ ವಿಷಯ ಕಳುಹಿಸಿದ್ದೀರಿ. ಅದನ್ನು ಸರ್ಕಾರದ ಗಮನಕ್ಕೆ ತಂದಿದೆ. ಅವರು ವಿಚಾರಮಾಡಿ ನಮ್ಮ ಆಫೀಸಿಗೆ ತಿಳಿಸಿದನಂತರ ಅದನ್ನು ಅಜೆಂಡಾದಲ್ಲಿ ಸೇರಿಸಲಾಗುತ್ತದೆ. ಅಲ್ಲಿಂದ ವಿಚಾರ ಬರಲಿ. ಹೀಗೆತಾವು ಏಕಾಏಕಿ ವಿಷಯವನ್ನೆತ್ತಿದರೆ ಸರ್ಕಾರದವರು ಹೇಗೆ ಉತ್ತರ ಕೊಡಲು ಸಾಧ್ಯ?

(ಎಪಿಸೋಡ್ ಆಫ್ ಶ್ರೀಮತಿ ಸುಮಿತ್ರಾ ದೇಸಾಯಿ)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ; ನೆನ್ನೆಯ ದಿವಸ ಸಭೆಯಲ್ಲಿ ಒಬ್ಬ ರಾಜ್ಯ ಸಚಿವರಿಗೆ ಸಂಬಂಧಪಟ್ಟ ಒಂದು ವಿಚಾರದಲ್ಲಿ ಇಲ್ಲಿ ಏನು ಒಂದು ವಿಷಯ ಸುಮಿತ್ರಾ ದೇಸಾಯಿ ಅನ್ನತಕ್ಕವರ ಬಗ್ಗೆ ನಡೆಯಿತು. ಅವರು ಬೊಂಬಾಯಿನಿಂದ ಬಂದವರು. ಆದರೆ ಇಲ್ಲಿ ನಮ್ಮ ಹೋಂ ಮಿನಿಸ್ಟರ್ ನನಗೆ ಆ ವಿಚಾರವೇ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದನ್ನು ಹೇಗೆ ನಂಬುವುದು? ರಾಜ್ಯ ಸಚಿವರಾದ ಕಿತ್ತೂರ್ ಅವರ ಮನೆಯಲ್ಲಿ ಒಬ್ಬ ಹೆಣ್ಣುಮಗಳು ಅದೃಶ್ಯರಾಗಿದ್ದಾರೆ. ಇದರ ಬಗೆ ಒಂದು ಹೇಳಿಕೆಯನ್ನು ಸಭೆಯ ಮುಂದೆ ಇಡುತ್ತೇವೆಂದು ಹೇಳಿದ್ದವರು ಈಗ ಈ ವಿಷಯವನ್ನು ಮುಚ್ಚಿಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂಬ ವದಂತಿಯನು ಕೇಳಿ ನನಗೆ ಬಹಳ ಭಯವಾಗುತ್ತಿದೆ.

ಶ್ರಿ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು):— The Hon. Chief Minister has said that he would make an enquiry into the matter and report to this House. Why is this matter being raised again here ?

ಶ್ರೀ ವಾಟಾಳ್ ನಾಗರಾಜ್.—ಯಾವ ಅಧಿಕಾರಿ ಆ ಮಂತ್ರಿಗಳ ಮನೆಗೆ ಹೋಗಿದ್ದವರು, ಏನು, ಎತ್ತ, ಎನ್ನತಕ್ಕ ವಿವರಗಳನ್ನೆಲ್ಲಾ ನಾನು ಶೇಖರಣೆ ಮಾಡಿದ್ದೇನೆ. ಇದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿ ನಡೆಯುವುದಾದರೆ ನಾನು ಎಲ್ಲ ವಿವರಗಳನ್ನೂ ಒದಗಿಸುವುದಕ್ಕೆ ಸಿದ್ಧವಾಗಿದ್ದೇನೆ.....

ಅಧ್ಯಕ್ಷರು.—ಏನು ತಮಗೆ ಸರ್ಕಾರದವರಿಗಿಂತಲೂ ಹೆಚ್ಚಿನ ಮಾಹಿತಿ ಗೊತ್ತಿದೆಯೇ?

Sri H. M. CHANNABASAPPA.—I am on a Point of Order. This question has come up before this House and the hon. Member has said all that he wanted to say.

Sri H. D. DEVE GOWDA.—He has not said all that he wanted to say.

Sri H. M. CHANNABASAPPA.—Granting that he did not say everything he wanted to say, the Chief Minister has assured this House that he wolud make enquiries and make a statement on the floor of the House. Such being the case, it would not be in order to reopen this question before the Chief Minister makes a statement.

Sri H. D. DEVE GOWDA.—If any additional information is available with the Members, they can bring it to the notice of the House.

Sri H. M. CHANNABASAPPA.—If he has any further information he can pass it on for the information of the House. There is no additional point he is making out. In the context of the Chief Minister having assured this House that a statement would be made after due enquiry, it would be against all cannons of procedure adopted by this House to go into the issue again.

ಶ್ರೀ ವಾಟಾಳ್ ನಾಗರಾಜ್.—ನನಗೆ ಇದರ ಬಗ್ಗೆ ಏಕೆ ಇಷ್ಟು ಸಂಶಯ ಉಂಟಾಗಿದೆ ಎಂದರೆ, ಇಲ್ಲಿ ಸರ್ಕಾರದವರು ಇದಕ್ಕೆ ಒಂದು ಬಣ್ಣ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಏನು ಎಂದರೆ ಆ ಹೆಂಗಸಿಗೆ ಹುಚ್ಚು ಹಿಡಿದಿತ್ತು ಎಂದು ಹೇಳಿ ಏನೋ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಹೇಳಿ ಕಣ್ಣನ್ನು ಒರೆಸಿಬಿಡುವುದಕ್ಕೆ ಹುಚ್ಚು ಹಿಡಿದಿತ್ತು ಎಂದು ಹೇಳಿ ಏನೋ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಹೇಳಿ ಪ್ರಯತ್ನಗಳು ನಡೆಯುತ್ತಿವೆ ಎಂದು.....

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ವಿಚಾರ ಮಾಡಿ ಸಭೆಯಲ್ಲಿ ಸ್ಟೇಮೆಂಟ್ ಮಾಡುವುದಾಗಿ ಹೇಳಿದ್ದಾರೆ. ಆದ್ದರಿಂದ ಮತ್ತೇಕೆ ಚರ್ಚೆ?

ಶ್ರೀ ವಾಟಾಳ್ ನಾಗರಾಜ್.—ಇವರು ಈ ವಿಚಾರದಲ್ಲಿ ಒಂದು ಹೊಸ ಕಥೆಯನ್ನೇ ಸೃಷ್ಟಿಮಾಡುವುದಕ್ಕೆ ಹೊರಟಿದ್ದಾರೆ. ಬನ್ನೇರುಘಟ್ಟದಿಂದ ತಪ್ಪಿಸಿಕೊಂಡ ಆ ಯುವತಿಯ ಗತಿ ಏನಾಗಿದೆ ಎಂಬುದನ್ನು ಪತ್ತೆ ಹಚ್ಚಲು ನಾನೂಕೂಡ ಶಕ್ತಿಮೀರಿ ಶ್ರಮಿಸಿದ್ದೇನೆ.....

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಹೀಗೆಲ್ಲಾ ಮಾಡಿದರೆ ಸತ್ಯಾಂಶವನ್ನು ಮುಚ್ಚುವುದಕ್ಕೆ ಹೊರಟರೆ ಇವರು ಬಹುಕಾಲ ಅಧಿಕಾರದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಚೆನ್ನಬಸಪ್ಪನವರಲ್ಲಿ ಕಿಂಚಿತ್ ಪ್ರಾಮಾಣಿಕತೆ ಇದ್ದರೆ ಅವರು ಇದರ ಬಗ್ಗೆ ಕೂಡಲೆ ತನಿಖೆ ನಡೆಸುತ್ತೇವೆಂದು ಒಪ್ಪಿಕೊಳ್ಳಲಿ.....

ಶೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ; ಇದರ ಬಗ್ಗೆ ನಾನು ಕೆಲವು ಸತ್ಯಾಂಶಗಳನ್ನು ತಮ್ಮ ಮುಂದೆ ಇಡಬೇಕಾಗಿದೆ. ದಿನಂಪ್ರತಿ ಪತ್ರಿಕೆಗಳಲ್ಲಿ ಏನೇನು ವರದಿಗಳು ಬರುತ್ತಿವೆ ಎಂಬುದನ್ನು ಸ್ಪಡಿ ಮಾಡಿಕೊಂಡು ಆ ಅಂಶವನ್ನು ಮುಖ್ಯ ಮಂತ್ರಿಗಳಿಗೆ ವರದಿಮಾಡುವುದಕ್ಕೆ ಒಬ್ಬ ಪತ್ರಿಕೆ—ಸೆಕೆ ಟೆರಿಯನ್ನು ನಮ್ಮ ಮುಖ್ಯ ಮಂತ್ರಿಗಳು ನೇಮಕ ಮಾಡಿ ಕೊಂಡಿದ್ದಾರೆ. ಆ ಪ್ರಕಾರ ಈ ವಿಚಾರ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮೊದಲೇ ಬಂದಿದೆ. ಹಾಗೆ ಬಂದ ನಂತರ ಅವರು ಒಬ್ಬ ಉನ್ನತ ಪೋಲೀಸ್ ಅಧಿಕಾರಿಗೆ ಫೋನ್‌ಮಾಡಿ ಆ ಹೆಣ್ಣುಮಗಳನ್ನು ಬಲವಂತದಿಂದ ದೂರವಾಗಿ ಎಲ್ಲಿಯಾದರೂ ಸಾಗಿಸಿಬಿಡಿ ಎಂದು ಹೇಳಿದ ವಿಷಯ ಒಂದುಸಾರಿ ಡೈರಿಗೆ ಎಂಟರಾದ್ದು ಮತ್ತೆ ಅದು ಮಾಯವಾಗಿದೆ. ಇದರಲ್ಲಿ ಬಹಳ ಗುರು ತರವಾದ ವಿಷಯ ಅಡಗಿದೆ. ಅಧ್ಯಕ್ಷರೂ ಕೂಡ ವಯಸ್ಸಾದವರು. ಅವರಿಗೆ ಇದರ ಸೀರಿಯಸ್‌ನೆಸ್ಸನ್ನು ತಿಳಿಯುವುದಕ್ಕೆ ಅವಕಾಶವಿದೆ. ಇಂಥ ಸೀರಿಯಸ್ ವಿಚಾರ ನಡೆದಿದ್ದರೂ ಇದನ್ನು ಕುತಂತ್ರದಿಂದ ಮುಚ್ಚಿ ಹಾಕುವುದಕ್ಕೆ ಪ್ರಯತ್ನಗಳು ಬಲವಾಗಿ ನಡೆಯುತ್ತಿವೆಯೆಂದು ನಮಗೆ ತಿಳಿದು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರದಲ್ಲಿ ಇಷ್ಟವಿದ್ದರೆ ಮುಖ್ಯಮಂತ್ರಿಗಳು ಸಂಬಂಧಪಟ್ಟ ಮಂತ್ರಿಗಳ ಬಗ್ಗೆ ಕ್ರಮ ಕೈಗೊಳ್ಳಲಿ. ಆ ಲೇಡಿ ಏನೋ ಸುಖವಾಗಿ ಪೋಲೀಸ್ ಏಸ್ಕಾರ್ಟಿನಿಂದ ಬೊಂಬಾಯಿ ತಲಪಿರಬಹುದೆಂದು ಕಾಣಬರುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೋಲೀಸಿನವರು ಆಕೆಯನ್ನು ಆಶ್ರಮದಿಂದ ಕರೆದುಕೊಂಡು ಹೋದ ಮೇಲೆ ಆಕೆ ಬದುಕಿದ್ದಾಳೆಯೇ ಅಥವಾ ಸತ್ತಳೇ ಎಂಬುದೇ ತಿಳಿಯದಾಗಿದೆ. ಇದರಲ್ಲಿ ಕೇವಲ ಒಬ್ಬ ಮಂತ್ರಿ ಗಳು ಮಾತ್ರ ಸೇರಿಲ್ಲ. ಇನ್ನೂ ಅನೇಕ ಮಂತ್ರಿಗಳು—ಒಂದು ಅವರದೇ ಕಂಪೆನಿ ಇದರಲ್ಲಿ ಸೇರಿದ್ದಾರೆ.....

ಶೀ ಎಚ್. ಎಂ. ಚನ್ನಬಸಪ್ಪ.—ಹುಡುಕಿದರೂ ಸಿಕ್ಕಲಿಲ್ಲ ಎಂದು ಒಬ್ಬರು, ಬೊಂಬಾಯಿಗೆ ಹೋಗಿ ದ್ದಾರೆಂದು ಇನ್ನೊಬ್ಬರು ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಿದ್ದಾರೆ.

ಶೀ ವಾಟಾಳ್ ನಾಗರಾಜ್.—ಸತ್ಯವಾದ ವಿಚಾರ ನಾನು ಹೇಳುವುದು.

ಶೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಚನ್ನಬಸಪ್ಪನವರು ಇಂಥ ಗಹನವಾದ ವಿಚಾರಗಳನ್ನು ಸಪ್ರೆಸ್‌ಮಾಡಲು ಪ ಯತ್ನಮಾಡಿ ಏನೋ ಹೇಳುತ್ತಿದ್ದಾರೆ. ಮಂತ್ರಿಮಂಡಲದ ಘನತೆಯ ಪ ಶ್ನೆ ಇದು, ತೀವ್ರವಾದ ಘಟನೆ. ಮಂತಿ ಮಂಡಲದ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಸಂಬಂಧಪಟ್ಟವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದು ಮತ್ತು ಅವರನ್ನು ಹೊರಗೆ ಹಾಕುವುದು ಯೋಗ್ಯವಾದುದು.

ಶೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಅನೇಕ ಇಂಜನಿಯರುಗಳನ್ನು ಸಸ್ಪೆಂಡ್ ಮಾಡಿ ದ್ದಾರೆ. ಅಂಥವರು ಮೊದಲು ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿ ಸೂಕ್ತ ಕ್ರಮ ಅವರಮೇಲೆ ತೆಗೆದು ಕೊಳ್ಳಬೇಕು. ಈಗ ಮಾಡುತ್ತಿರುವುದನ್ನು ನೋಡಿದರೆ ಸರಕಾರವಿದೆಯೇ ಎಂದು ಕೇಳಬೇಕಾಗಿದೆ.

ಶೀ ಬಿ. ಬಸವಲಿಂಗಪ್ಪ.—ಮುಖ್ಯಮಂತ್ರಿಗಳು ವಿಚಾರಮಾಡಿ ತಿಳಿಸುವುದಾಗಿ ಹೇಳಿರುವಾಗ ಹುಡುಕುವ ಕೆಲಸ ಏಕೆ ಅವರು ಮಾಡಿದರು ?

ಶೀ ಎಚ್. ಡಿ. ದೇವೇಗೌಡ.—ಸರಕಾರ ತನ್ನ ನೈತಿಕ ಬಲವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದಾಗ ವಿರೋಧ ಪಕ್ಷ ಎಚ್ಚರಿಸಬೇಕಾಗುತ್ತದೆ.

It has got its responsibility to probe into these matters.

ಶೀ ಬಿ. ಪುಟ್ಟಸ್ವಾಮಯ್ಯ.—ಸರಕಾರ ಇಂಥ ಪಾಪದ ಕೆಲಸ ಮಾಡಬಹುದೇ ?

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸರು ಮತ್ತು ಇತರ ಎಲ್ಲಾ ಅಧಿಕಾರ ಸಿಬ್ಬಂದಿ ವರ್ಗೆರೆ ಇಟ್ಟು ಕೊಂಡಿರುವವರು ಪತ್ರಿಕೆಯಲ್ಲಿ ಈ ವಿಷಯ ಬಂದು ಎರಡು ದಿವಸವಾದರೂ ಸಭೆಗೆ ಸರಿಯಾದ ವಿಷಯ ತಿಳಿಸದಿದ್ದರೆ ನಾವೇನು ಮಾಡಬೇಕು? ಬಹಳ ನಿಧಾನ ಮಾಡಿದರೆ ಪ್ರಾಮಾಣಿಕತೆ ವಿಷಯದಲ್ಲಿ ಸಂಶಯ ಬರುವುದು. ಇದು ಸರಕಾರದ ಘನತೆಯ ಸಂಬಂಧಪಟ್ಟ ವಿಚಾರ. ಜಾಗ ತೆ ಸರಿಯಾಗಿ ವಿಚಾರಿಸಿ ವಿಷಯ ತಿಳಿಸಲು ಪ್ರಯತ್ನಮಾಡದೆ ಗೋಲ್‌ಮೇಲ್ ಮಾಡುವುದಕ್ಕೆ ಪ್ರಯತ್ನಮಾಡಬಾರದು.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಊರಿನಲ್ಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವರಿಲ್ಲದಿದ್ದರೆ ಬೇರೆ ಮಂತ್ರಿಗಳಿದ್ದಾರೆ, ಅವರು ಹೇಳಬಹುದು.

ಅಧ್ಯಕ್ಷರು.—ಇದನ್ನು ಮುಖ್ಯ ಮಂತ್ರಿಗಳೇ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಸಚಿವ ಸಂಪುಟದ ಮೇಲೆ ಸಂದೇಹಕ್ಕೆ ಅವಕಾಶವಾಗಿದೆ. ಉದ್ದೇಶ ಪೂರ್ವಕವಾಗಿಯೇ ವಿಷಯ ತಿಳಿಸಲು ನಿಧಾನಮಾಡುತ್ತಿದ್ದಾರೆ. ಅವರಿಗೆ ಇನ್‌ಫರ್ಮೇಷನ್ ಬಂದಿಲ್ಲವೇ? ಗೃಹ ಸಚಿವರಾಗಿರುವವರಿಗೆ ಇನ್‌ಫರ್‌ಮೇಶನ್ ಬೇಗ ಬಂದೇ ಬರುವುದು. ರಕ್ಷಣಾ ಸಚಿವರಿಗೆ ಇನ್‌ಫರ್‌ಮೇಷನ್ ಬಂದಿಲ್ಲವೆಂದರೆ ನಾಚಿಕೆಗೇಡು. ಇದನ್ನು ನೋಡಿ ವ್ಯಥೆಯಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ಪತ್ರಿಕೆಯಲ್ಲಿ ಐ.ಜಿ.ಪಿ. ಸರಕಾರಕ್ಕೆ ವರದಿ ಕಳಿಸಿರುವುದಾಗಿ ಪ್ರಕಟ ವಾಗಿದೆ, ಸರಕಾರ ಅಂದರೆ ಮಂತ್ರಿಗಳು. ನಿನ್ನೆ ಪತ್ರಿಕೆಯಲ್ಲಿ ಈ ವಿಷಯ ಬಂದಿದ್ದರೂ ಗೊತ್ತಿಲ್ಲ. ಇನ್‌ಫರ್‌ಮೇಷನ್ ಬಂದಿಲ್ಲ ಅಂದರೆ ನಂಬುವುದಕ್ಕೆ ಸಾಧ್ಯವೇ? ಇಷ್ಟು ಸಿ.ಐ.ಡಿ.ಗಳು, ಪೋಲೀಸಿನವರು ಇರುವಾಗ ಇನ್ನೂ ಸಮಾಚಾರ ತಿಳಿದಿಲ್ಲವೆಂದರೆ ಹೇಗೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೇಳಿರುವುದನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ ವಿಚಾರಿಸುವುದಾಗಿ ಹೇಳಿದ್ದಾರೆ, ವಿಷಯ ಪರಿಶೀಲಿಸಿ ಎನ್‌ಕ್ವೈರಿ ಮಾಡಿ ಸಭೆಯ ಮುಂದಿಡುವುದಾಗಿ ಹೇಳಿದ್ದಾರೆ. ಅನೇಕ ಸಮಾಚಾರ ವಿರೋಧ ಪಕ್ಷದವರೇ ಹೇಳುತ್ತಿದ್ದಾರೆ. ಪೋಲೀಸ್ ವರದಿ ಬರುವುದು. ಅದರ ಸತ್ಯಾಸತ್ಯತೆ ನೋಡಿ ಎನ್‌ಕ್ವೈರಿ ಮಾಡಿ ಸಭೆಯ ಮುಂದಿಡುವುದಾಗಿ ಹೇಳಿದಾರೆ. ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಎಲ್ಲರೂ ಓದಿದ್ದಾರೆ, ಅನೇಕ ಕಡೆಯಿಂದ ಅನೇಕ ಇನ್‌ಫರ್‌ಮೇಷನ್ ಬಂದಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರಕಾರದ ಮೆಷೀನರಿ ಮುಚ್ಚಿಡುವುದಕ್ಕೆ ಹೊರಟಿದ್ದಾರೆ.

ಶ್ರೀ ಎಚ್. ಎಂ ಚನ್ನಬಸಪ್ಪ.—ಮುಚ್ಚಿಡುವ ಪ್ರಮೇಯವಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದೆ.

ಶ್ರೀ ವಾಟಾಳ್ ನಾಗರಾಜ್.—ಸರಿಯಾದ ವಿಷಯ ಬೈಲಿಗೆ ಬಂದರೆ ಇಡೀ ಮಂತ್ರಿ ಮಂಡಲಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಹಾಗೆ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಜವಾದ ವಿಷಯ ಮುಚ್ಚಿಟ್ಟಿರುವುದಾಗಿ ಗೊತ್ತಾದರೆ ರಾಜೀನಾಮೆ ಕೊಡುವಿರಾ? ಮಂತ್ರಿಗಳು ಒಳ್ಳೆಯವರು, ಸತ್ಯವಂತರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಕ್ರಮ ಉಳಿದಕಡೆ ಆಗಿರಬಹುದು, ಇಲ್ಲಿ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಚನ್ನಬಸಪ್ಪನವರು ಗೃಹ ಸಚಿವರಾಗಿದ್ದರೆ ಇಷ್ಟು ನಿಧಾನ ಮಾಡುತ್ತಿದ್ದರೇ? ಅವರು ತಮ್ಮ ಆತ್ಮವನ್ನು ಮುಟ್ಟಿನೋಡಿಕೊಂಡು ಹೇಳಲಿ. ಇರುವ ವಿಷಯವನ್ನು ಈ ಸಂಬಂಧದಲ್ಲಿ ಮುಚ್ಚಿಡಬಾರದು. ಇದರ ಬಗ್ಗೆ ತೀವ್ರವಾಗಿ ಈ ಸಾಯಂಕಾಲದೊಳಗೇ ತಿಳಿಸಬೇಕು.

Sri H. M. CHANNABASAPPA.—The Hon'ble Chief Minister has made a categorical statement that he would enquire into the matter and give a statement to the House. He requires some time

(Sri H. M. Channabasappa)

to make enquires. Therefore, I would appeal to the Hon'ble Members to have some patience.

ಶೀ ಎಂ. ಎಸ್. ಕೃಷ್ಣನ್.—ಬೆಂಗಳೂರು ಜನತೆಗೆ ಮತ್ತು ಹೌಸಿಂಗ್ ಬೋರ್ಡಿಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ ತಿಳಿಸಬೇಕಾಗಿದೆ.

LEAVE OF ABSENCE TO SRI G. P. NANJAYYANAMATH—GRANT OF

Madam SPEAKER.—I have received a letter from Sri G. P. Nanjayyanamath, Member, Legislative Assembly, requesting for leave of absence from the House till the end of the current session of the Assembly due to ill-health.

Is it the pleasure of the Assembly that the permission be granted to Sri G. P. Nanjayyanamath ?

Hon'ble MEMBERS.—Yes.

Madem SPEAKER.—Permission to remain absent is granted.

CHANGE IN POLICY OF CONSTRUCTION OF LOW GROUP AND MIDDLE INCOME HOUSES.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಹೌಸಿಂಗ್ ಬೋರ್ಡಿನವರು ಇದುವರೆಗೆ ಬೆಂಗಳೂರಿನಲ್ಲಿ ಮತ್ತಿತರ ಕಡೆಗಳಲ್ಲಿ ಲೋ ಇನ್‌ಕಂ ಮತ್ತು ಮಿಡ್ ಇನ್‌ಕಂ ಗ್ರೂಪಿನವರಿಗೆ ಸಾಲ ಮನೆ ಕಟ್ಟಿಕೊಳ್ಳಲು ಕೊಡುತ್ತಿದ್ದರು. ಇದರಿಂದ ಅನೇಕರಿಗೆ ಅನುಕೂಲವಾಗುತ್ತಿತ್ತು. ಈಗ ಬೇರೊಂದು ಪಾಲಿಸಿ ಅನುಸರಿಸುವ ಬಗ್ಗೆ ಮೇಲ್ಮನೆಯಲ್ಲಿ ಮಂತ್ರಿಗಳು ಪ್ರಸ್ತಾಪಿಸಿದ್ದಾರೆ. ಸೈಟಿರುವವರು ಮನೆಗೆ ಆಗುವ ಖರ್ಚಿನಲ್ಲಿ ಸೇಕಡ 25 ಭಾಗ ಕೊಟ್ಟರೆ ಹೌಸಿಂಗ್ ಬೋರ್ಡ್ ಅವರಿಗೆ ಮನೆ ಕಟ್ಟಿಕೊಡುವುದು ಎಂದು ತಿಳಿಸಿದ್ದಾರೆ. ಮನೆಗೆ ಎಸ್ಟಿಮೇಟ್ ಮಾಡಿ 40 ಸಾವಿರ ರೂಪಾಯಿ ಬೇಕಾದರೆ 10 ಸಾವಿರ ರೂಪಾಯಿ ಯಾರು ಕೊಡಲು ಸಾಧ್ಯ? ಹೌಸಿಂಗ್ ಬೋರ್ಡಿನವರು ಇದುವರೆಗೆ ಕಟ್ಟಿಸಿರುವ ಮನೆಗಳ ಗತಿ ಯೇನಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಅನೇಕ ಮನೆಗಳು ಸೋರುತ್ತಿವೆ. ಸರಿಯಾದ ಸ್ಥಿತಿಯಲ್ಲಿಲ್ಲ. ಕಂಟ್ರಾಕ್ಟರುಗಳು ಮೋಸ ಮಾಡುತ್ತಿದ್ದಾರೆ. ಆದಕ್ಕಾಗಿ ಅನೇಕರು ತಾವೇ ಮನೆ ಕಟ್ಟಿಸಿಕೊಳ್ಳಲು ಅರ್ಜಿ ಹಾಕಿದ್ದಾರೆ. ಬೆಂಗಳೂರಿನಲ್ಲಿ ಹಾಕಿರುವಂತೆ ಇತರ ಕಡೆಗಳಲ್ಲೂ ಅರ್ಜಿ ಹಾಕಿರಬಹುದು. ಈಗ ಮಂತ್ರಿಗಳು ತಿಳಿಸಿರುವ ಹೊಸ ನೀತಿ ಸರಿಯಾಗಿಲ್ಲ. ತತ್ವಕ್ಕೆ ವಿರೋಧವಾಗಿದೆ. ಮದ್ರಾಸಿನಲ್ಲಿ ಹೀಗೆ ಮಾಡಲಾಗಿದೆ, ಆದುದರಿಂದ ನಾವು ಮಾಡುತ್ತೇವೆಂದು ಅವರು ಹೇಳುವರು. ಮದ್ರಾಸಿನಲ್ಲಿ ಮಾಡಿರುವುದೆಲ್ಲಾ ಒಳ್ಳೆಯದಲ್ಲ. ಹಾಗೆ ಮಾಡುವುದಾದರೆ ಅಲ್ಲಿ ಮಾಡಿರುವುದನ್ನೆಲ್ಲಾ ಇಲ್ಲಿ ಮಾಡಲು ತಯಾರಿಲ್ಲ. ಈಗ ತಿಳಿಸಿರುವ ಧೋರಣೆ ಸರಿಯಲ್ಲ, ಇದನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸ್ಪಷ್ಟವಾದ ನೀತಿಯನ್ನು ತಾಳಬೇಕು. ಸಾಲಕ್ಕಾಗಿ ಹಾಕಿರುವ ಅರ್ಜಿಗಳು ನಾಲ್ಕು ವರ್ಷಗಳಿಂದ ಕೊಳೆಯುತ್ತಿವೆ. ಹೌಸಿಂಗ್ ಬೋರ್ಡ್ ಈ ಸಭೆಯ ತೀರ್ಮಾನಕ್ಕೆ ವಿರೋಧವಾಗಿ ನಡೆದಿದೆ ; ಮಂತ್ರಿಗಳು ಹೇಳಿದ ಹಾಗೆ ಆದು ಕೇಳಬೇಕು ಎಂಬ ಧೋರಣೆ ಇರುವುದು ಸರಿಯಲ್ಲ. ಇದರ ಬಗ್ಗೆ ಮಂತ್ರಿಗಳ ವರ್ತನೆ ಸರಿಯಾಗಿಲ್ಲ. ಸಾಮಾನ್ಯ ಜನರಿಗೆ ಅನಾನುಕೂಲವಾಗಿರುವ ನಿಲುವನ್ನು ತಾಳದೆ ಈಗಿರುವ ಧೋರಣೆ ಬದಲಾಯಿಸ ಬೇಕೆಂದು ಕೇಳಬೇಕಾಗಿದೆ.